**VIII. ಟಿಪ್ಪಣಿ ಓದಿ, ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ಸ್ಮಿತಾ ಮತ್ತು ವಿಮಲ ಒಳ್ಳೆಯ ಸಹಪಾಠಿಗಳು. ಅವರು ಅಕ್ಕ ಪಕ್ಕದ ಮನೆಯವರು. ಸ್ಮಿತಾ ಮತ್ತು ವಿಮಲ ಆಗಾಗ್ಗೆ ಪರಸ್ಪರ ಭೇಟಿಯಾಗುತ್ತಿದ್ದರು. ಒಮ್ಮೆ ಸ್ಮಿತಾ ಬಿದ್ದು ಗಾಯಗೊಂಡಾಗ ಅವಳನ್ನು ಆಸ್ಪತ್ರೆಗೆ ಸೇರಿಸಿದ್ದರು. ಅನೇಕ ವಿಧದ ಪರೀಕ್ಷೆಗೆ ಒಳಪಡಿಸಿದ ನಂತರ ವೈದ್ಯರು ಅವಳು ಕ್ಯಾನ್ಸರ್ ರೋಗಿಯೆಂದು ಗುರುತಿಸಿದರು. ಸ್ಮಿತಾಳನ್ನು ಮನೆಗೆ ಕರೆದುಕೊಂಡು ಬಂದರು. ಸ್ಮಿತಾಳು ಕ್ಯಾನ್ಸರ್ ರೋಗಿಯೆಂದು ತಿಳಿದಾಕ್ಷಣದಿಂದ ವಿಮಲ ಅವಳ ಭೇಟಿಯನ್ನು ನಿಲ್ಲಿಸಿದಳು. ಆದರೆ ಸ್ಮಿತಾಳು ವಿಮಲಳ ಭೇಟಿಗಾಗಿ ತುಂಬಾ ಹಾತೊರೆಯುತ್ತಿದ್ದಳು.

   **a) i)** ವಿಮಲಳ ವರ್ತನೆ ನಿನಗೆ ಮೆಚ್ಚಿತೆ?

   **ii)** ಏಕೆ?

   **b)** ಒಂದು ವೇಳೆ ಸ್ಮಿತಾಳು ನಿನ್ನ ಪಕ್ಕದ ಮನೆಯವಳಾಗಿದ್ದರೆ ನೀನೇನು ಮಾಡುತ್ತಿದ್ದೆ? ಎರಡು ಸಲಹೆ ಕೊಡು.

   **c)** ಇತರರ ಕಷ್ಟದಲ್ಲಿ ನಾವು ಅನುಕಂಪ ತೋರಿಸಬೇಕೇ? ಏಕೆ? ವಿವರಿಸು.

2. ಪ್ರದೀಪ್‌ನ ಮನೆ ಮಾರ್ಗದ ಬದಿಯಲ್ಲಿದೆ. ಅವನು ತನ್ನ ಮನೆಯನ್ನು ಅಂದ–ಚಂದವಾಗಿ ಇಡಲು ಪ್ರಯತ್ನಿಸುತ್ತಾನೆ. ಮನೆಯನ್ನು ದಿನನಿತ್ಯ ಗುಡಿಸುವುದು, ಪಾತ್ರೆ–ಬಟ್ಟೆಯನ್ನು ಶುಭ್ರವಾಗಿಡುವುದು ಅವನ ದಿನ ನಿತ್ಯದ ಕೆಲಸ. ಆದರೆ ಮನೆಯೊಳಗಿನ ಎಲ್ಲಾ ಕಸವನ್ನು ಮಾರ್ಗದ ಬದಿಯಲ್ಲಿ ಎಸೆಯುವನು. ಇತರರು ಪ್ರಶ್ನಿಸಿದುದಕ್ಕೆ, "ಅದು ನನ್ನ ಸ್ವಾತಂತ್ರ್ಯ. ಮಾರ್ಗವನ್ನು ಗುಡಿಸುವವರು ಇದನ್ನೂ ಗುಡಿಸಲಿ" ಎಂದು ಒರಟಾಗಿ ನುಡಿಯುವನು.

   **a) i)** ಪ್ರದೀಪನ ವರ್ತನೆ ನಿನಗೆ ಸರಿ ಎಂದು ತೋರುತ್ತದೆಯೆ?

   **ii)** ಏಕೆ?

   **b) i)** ನಮ್ಮ ಸುತ್ತ ಮುತ್ತ ನೈರ್ಮಲ್ಯತೆಯನ್ನು ಹೇಗೆ ಕಾಪಾಡಬೇಕು? ಎರಡು ಉದಾಹರಣೆ ಕೊಡು.

   **c) i)** ಸ್ವಾತಂತ್ರ್ಯ ಎಂದರೇನು?

   **ii)** ಪ್ರದೀಪನಿಗೆ ಸ್ವಾತಂತ್ರ್ಯ ಮತ್ತು ನೈರ್ಮಲ್ಯತೆಯ ಬಗ್ಗೆ ನಿನ್ನ ಬುದ್ಧಿವಾದ ಏನು?



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 11–01–2014** **ಸಮಯ : $2^1/_2$ ಘಂಟೆ**

**ತರಗತಿ : VII** **ಅಂಕ : 100**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ: 10x1=10**

1. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ______ ಅರ್ಥಮಾಡಿಕೊಳ್ಳಬಲ್ಲ.
   (ಇಚ್ಛೆಯನ್ನು; ಭಾವನೆಗಳನ್ನು; ಪ್ರೀತಿಯನ್ನು)
2. ಇತರರ ಮತ್ತು ಸಮಾಜದ ಒಳಿತನ್ನು ಕಾಯಾ ವಾಚಾ ಮನಸಾ ಪ್ರವರ್ಧಿಸುವವರು ________.
   (ಒಳ್ಳೆಯ ಜನರು; ಕೆಟ್ಟ ಜನರು; ದೇವರು)
3. ಹಂಚಿಕೊಳ್ಳುವುದರಿಂದ ಸಂತೋಷ ______ ವಾಗುತ್ತದೆ.
   (ಕಡಿಮೆ; ಅಧಿಕ; ಸಮ)
4. ______ ಎಂದರೆ ಸಂತೃಪ್ತಿಯಿಂದಿರುವ ಸ್ಥಿತಿ.
   (ಸಂತೋಷ; ಬೇಸರ; ದುಃಖ)
5. ಐದು ಸಾವಿರ ನಾಣ್ಯಗಳನ್ನು ಪಡೆದವನು ಇನ್ನೂ _______ ಸಾವಿರ ನಾಣ್ಯಗಳನ್ನು ಗಳಿಸಿದನು.
   (ಎರಡು; ಎಂಟು; ಐದು)
6. ______ ರ ಕಿವುಡುತನ ಲೋಕಕ್ಕೆ ತನ್ನ ಪ್ರತಿಭೆಯನ್ನು ತೋರುವಲ್ಲಿ ತೊಡಕಾಗಲಿಲ್ಲ.
   (ಅಬ್ರಹಾಂ ಲಿಂಕನ್; ಬಿಥೋವನ್; ವೊಲ್ಟೇರ್)
7. ಮರಗಳು ಜಾಸ್ತಿಯಿದ್ದರೆ ______ ಗಳು ಆರೋಗ್ಯವಂತರಾಗಿ ಬೆಳೆಯುತ್ತಾರೆ.
   (ಮಾನವ ಜೀವಿಗಳು; ಶ್ರೀಮಂತರು; ಕಾರ್ಮಿಕರು)
8. ಮೌಲ್ಯ ಶಿಕ್ಷಣವು ಒಂದು _______ ವಿಷಯವೆಂದು ಸತ್ಯ ಕಡೆಗಣಿಸಿದ್ದನು.
   (ಉಪಯುಕ್ತ; ನಿರುಪಯುಕ್ತ; ಸ್ಪರ್ಧೆಯ)
9. ನಾವು ಪ್ರತಿಪಾದಿಸುವ ಮತ್ತು ನಂಬುವ ಗುಣವೇ ______
   (ಸ್ವಾತಂತ್ರ್ಯ; ಸಂತೋಷ; ಮೌಲ್ಯ)
10. ಕೊರತೆಯುಳ್ಳವರಿಗೆ ಸೇವೆ ಸಲ್ಲಿಸುವುದು ಎಂದರೆ ______ ಸಲ್ಲಿಸಿದಂತೆ.
    (ದೇಶಕ್ಕೆ; ದೇವರಿಗೆ; ಸಮಾಜಕ್ಕೆ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ : 10x1=10**

1. ಮಾನವ ಜೀವಿಗಳು ಇತರರ ಬಗ್ಗೆ ________ ವನ್ನು ಹೊಂದಿದ್ದಾರೆ.
2. ________ ಆಯ್ಕೆ ಮಾಡುವ ನಮ್ಮ ಸಾಮರ್ಥ್ಯಕ್ಕೆ ಅನ್ವಯಿಸುತ್ತದೆ.
3. ಒಂದು ಕೆಲಸ ಮಾಡಲು ಸೂಕ್ತ ________ ವನ್ನು ಗುರುತಿಸಬೇಕು.
4. ಪ್ರತಿಯೊಬ್ಬರಲ್ಲೂ ಹುದುಗಿದ ಅನೇಕ ________ ಗಳಿವೆ.
5. ನಮ್ಮ ಸೃಷ್ಟಿಯ ಉದ್ದೇಶವೇ ________.
6. ನೈಜ ________ ಜೀವಮಾನ ಪರಿಯಂತರದ ಕ್ರಿಯೆ.
7. ನಾವು ಒಳಿತನ್ನು ಆಯ್ಕೆ ಮಾಡಿದಾಗ ಅದು ನಮ್ಮ _______ ವನ್ನು ಉನ್ನತಿಗೇರಿಸುತ್ತದೆ.
8. ________ ಮಾನವನ ಘನತೆ, ಗೌರವವನ್ನು ಸೂಚಿಸುತ್ತದೆ.
9. ಇತರರನ್ನು ಅರಿತುಕೊಂಡಿರುವವರು ವಿಧ್ಯಾವಂತರು. ತಮ್ಮನ್ನೇ ಅರಿತುಕೊಂಡಿರುವವರು ________ .
10. ಮನುಷ್ಯನ ಪ್ರಾಮಾಣಿಕತೆಯನ್ನು ಕಂಡು ______ಗೆ ತುಂಬ ಸಂತೋಷವಾಯಿತು.

**III. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ಜಾನ್ ವೆಸ್ಲಿ | – | ಮೌಲ್ಯದ ಮಾನವನಾಗು |
| 2. ಡಾಗ್ ಹ್ಯಾಮರ್ ಶೀಲ್ಡ್ | – | ಸಂತೋಷ ಅಂತರಂಗದೊಳಗಿನ ವ್ಯವಹಾರ |
| 3. ವೋಲ್ಟೇರ್ | – | ಬಾಹ್ಯ ಆಕಾಶ ಅನ್ವೇಷಣೆ |
| 4. ಜಾನ್ ಪೋವೆಲ್ | – | ಸಂತೋಷ ಅದ್ಭುತ ವಸ್ತು |
| 5. ಆಲ್ಬರ್ಟ್ ಐನ್‌ಸ್ಟೈನ್ | – | ದೈವತ್ವದ ನಂತರ ನಿರ್ಮಲತೆ ಪ್ರಧಾನ |

**IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ : 5x1=5**

1. ಮಾನವ ಜೀವಿಗಳು ಯಾವಾಗಲೂ ಸಂತೋಷವನ್ನು ಹುಡುಕುತ್ತಿರುತ್ತಾರೆ.
2. ಮರ ಕಡಿಯುವವನ ಪ್ರಾಮಾಣಿಕತೆಯನ್ನು ಕಂಡು ದೇವತೆ ಎರಡೂ ಕೊಡಲಿಗಳನ್ನು ಕೊಟ್ಟಳು.
3. ಶುದ್ಧವಾಗಿರುವುದು ಎಂದರೆ ಶುಭ್ರ ವಸ್ತ್ರ ಧರಿಸುವುದು.
4. ಬಾಯಾರಿಕೆಯಾದಾಗ ಕಂಡ ಸ್ಥಳಗಳಲ್ಲಿ ನೀರನ್ನು ಕುಡಿಯಬೇಡಿ.
5. ಒಳ್ಳೆಯ ಭಾವನೆಗಳನ್ನು ಸೂಕ್ಷ್ಮ ಭಾವನೆಗಳೆಂದು ಕರೆಯುವರು.



**V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 10x2=20**

1. ಮೌಲ್ಯ ಶಿಕ್ಷಣದ ಪ್ರಾಮುಖ್ಯತೆಯನ್ನು ಸತ್ಯ ಯಾವಾಗ ತಿಳಿದುಕೊಂಡನು?
2. ಸಂತೋಷದಿಂದ ಬಾಳುವುದು ಎಂದರೇನು?
3. ನಾವು ಪರಿಣಾಮಕಾರಿಯಾಗಿ ನಮ್ಮ ಪ್ರತಿಭೆಗಳನ್ನು ಯಾಕೆ ಬಳಸಬೇಕು?
4. ಶುದ್ಧತೆಯಲ್ಲಿ ನಡೆಯುವುದು ಎಂದರೇನು?
5. "ನನ್ನ ಪ್ರಾಮಾಣಿಕತೆ" ಪಾಠದಲ್ಲಿ ದೇವತೆ ನಮಗೆ ಯಾವ ನೀತಿಯನ್ನು ಕಲಿಸಲು ಅಪೇಕ್ಷಿಸುತ್ತಾಳೆ?
6. ಅರ್ಥಭರಿತ ಸ್ವಾತಂತ್ರ್ಯ ಎಂದರೇನು?
7. ಮಾಲ್ವಾದ ಯುವತಿ, ಮದರ್ ತೆರೇಜಾ ಅವರಿಗೆ ಏನೆಂದು ಹೇಳಿದಳು?
8. ನಿನ್ನ ಜೀವನದಲ್ಲಿ ಪ್ರತಿಭೆ ಎಂಬ ಪದ ಯಾವ ಅರ್ಥವನ್ನು ಹೊಂದಿದೆ?
9. ಮಾನವ ಪ್ರೀತಿಯನ್ನು ವ್ಯಕ್ತಪಡಿಸುವ ನಾಲ್ಕು ಭಾವನೆಗಳನ್ನು ಬರೆ.
10. ಆರೋಗ್ಯ ಪ್ರಜ್ಞೆ ಎಂದರೇನು?

**VI. ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಏಳು ವಾಕ್ಯಗಳಲ್ಲಿ ಉತ್ತರಿಸಿರಿ: 4x7=28**

1. ಸಾಕು ನಾಯಿ ಹಾಗೂ ಬೀದಿ ನಾಯಿಯ ಜೀವನವನ್ನು ವಿವರಿಸು. ಇದರಿಂದ ನಾವು ಕಲಿಯುವ ಪಾಠ ಏನು?
2. ಮೌಲ್ಯ ಶಿಕ್ಷಣದ ಉದ್ದೇಶಗಳು ಯಾವುವು?
3. ಸಂತೋಷದ ಜೀವನ ನಡೆಸಲು ಜಾನ್ ಪೋವೆಲ್ ಕೊಡುವ ಸಲಹೆಗಳಾವುವು?
4. ನೀನು ತುಂಬಾ ಸಂತೋಷಪಟ್ಟ ಒಂದು ಸಂದರ್ಭ ಅಥವಾ ಸಮಾರಂಭದ ಬಗ್ಗೆ ಕೆಲವು ವಾಕ್ಯಗಳಲ್ಲಿ ಬರೆ.
5. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ಭಾವನೆಗಳನ್ನು ಅರ್ಥಮಾಡಿಕೊಳ್ಳಬಲ್ಲ. ವಿವರಿಸು.
6. ನಿನ್ನ ಜೀವನದಲ್ಲಿ ನೀನು ಕಂಡ ಅತ್ಯುತ್ತಮ ವ್ಯಕ್ತಿ ಯಾರು? ಆ ವ್ಯಕ್ತಿಯಲ್ಲಿ ನೀನು ಕಂಡ ಐದು ಸದ್ಗುಣಗಳನ್ನು ಬರೆ.

**VII. ಈ ಕೆಳಗಿನ ಎರಡು ವಿಷಯದ ಕುರಿತು ಟಿಪ್ಪಣಿ ಬರೆಯಿರಿ : 2x5=10**

1. ಪ್ರಾಮಾಣಿಕ ವ್ಯಕ್ತಿಗಳನ್ನು ದೇವರು ಪ್ರೀತಿಸುತ್ತಾರೆ.
2. ಶುದ್ಧತೆಯನ್ನು ಕಾಪಾಡಬೇಕು.
3. ನೀನು ಸ್ವತಂತ್ರವಾಗಿ ಎದುರಿಸಿದ ಜೀವನದ ಒಂದು ಘಟನೆ.
4. ಮೌಲ್ಯ ಶಿಕ್ಷಣ ಎಲ್ಲಾ ಶಿಕ್ಷಣಕ್ಕಿಂತ ಪ್ರಮುಖವಾದುದು.